ಬೀಸಣಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್.

ಖಾಸಗಿ ಪ್ರಸಾರಕ್ಕಾಗಿ ೧೩-೬-೮೨ ಭಾನುವಾರ ೨೦

ಮರದ ತೊಪ್ಪೆ ಕಳ್ಳಸಾಗಣೆ: ಮತ್ತಷ್ಟು ಸಂಗತಿಗಳು

ಶೃಂಗೇರಿ: ಕಿಗ್ಗ ಹೋಬಳಿಯ ಗ್ರಾಮಗಳಿಂದ ವ್ಯಾಪಕವಾಗಿ ಗುಳಮಾವಿನ ತೊಪ್ಪೆ ಅಕ್ರಮ ಸಾಗಣೆಯ ಬಗ್ಗೆ ಇನ್ನಷ್ಟು ಸಂಗತಿಗಳು ತಿಳಿದು ಬಂದಿವೆ.

ಬಲವಂತಿಯ ಕಡೆ ಹೋಗುವ ಉದ್ದೇಶವನ್ನು ರದ್ದು ಮಾಡಲಿಲ್ಲ. ಅಲ್ಲಿಂದಲೂ ತೊಪ್ಪೆ ಸಾಗಿಸುತ್ತಿದ್ದವರು ಅರ್ಧದಲ್ಲೇ ಕಾರ್ಯಾಚರಣೆ ನಿಲ್ಲಿಸಿ, ಚೀಲಗಳನ್ನು ಮಾರಿ ಹೊರಟುಹೋದರು ಎಂದು ಗೊತ್ತಾಗಿದೆ.

ಅವರು ತೊಪ್ಪೆಯನ್ನು ಲಾರಿಗೆ ತುಂಬುತ್ತಿದ್ದುದು ರಾತ್ರಿ ಹೊತ್ತಿನಲ್ಲಿ. ಅಲ್ಲದೆ ಕೆಲವೊಮ್ಮೆ ಬಿಳಿಯ ಉಡುಪು ಧರಿಸಿದವರು (ವಿದ್ಯಾವಂತರು ಅಥವಾ ಅಧಿಕಾರಿಗಳ ಥರ ಕಾಣುವುದರಿಂದಲೋ) ಕಂಡಾಗ ಸ್ವಲ್ಪ ಮರೆಯಾಗುತ್ತಿದ್ದರು. ಇದರಿಂದ ಗ್ರಾಮಸ್ಥರ ಅನುಮಾನ ಹೆಚ್ಚಲು ಕಾರಣವಾಯಿತು. ಹೀಗೆ ಅನುಮಾನ ಬಂದ ಗ್ರಾಮದ ಮುಖಂಡನೊಬ್ಬರು ಅವರನ್ನು-ಲೈಸೆನ್ಸ್ ಮಾಡಿಸಿದ್ದೀರಾ? ಪರ್ಮಿಟ್ ಇದೆಯಾ? ಯಾಕೆ ರಾತ್ರಿ ಹೊತ್ತು ಸಾಗಿಸುತ್ತೀರಿ? -ಎಂದೆಲ್ಲ ವಿಚಾರಿಸಿದಾಗ ಜುಬ್ಬಾದ ಜೇಬಿನಿಂದ ಕಾಗದವೊಂದನ್ನು ತೆಗೆದು ತೋರಿಸಿ, "ನೋಡಿ, ಇಲ್ಲಿದೆ ಪರ್ಮಿಟ್" ಎಂದರಂತೆ. ಅದರಲ್ಲಿ ಶೃಂಗೇರಿ ವಲಯ ಅರಣ್ಯಾಧಿಕಾರಿಗಳ ಸಹಿ ಮತ್ತು ಸೀಲು ಇದ್ದವಂತೆ. ಬಾಕಿ ಬರಹವೆಲ್ಲ ಬಹುಶಃ ಇಂಗ್ಲೀಷಿನಲ್ಲಿದ್ದು, ಅವರಿಗೇನೂ ತಿಳಿಯಲಿಲ್ಲ. ಅಂತೂ ರೇಂಜರ ಸಹಿ-ಸೀಲು ನೋಡಿ ಸುಮ್ಮಗಾದರಂತೆ.

ಸಿಬ್ಬಂದಿ ಶಾಮೀಲು?

ಹಳ್ಳಿಗಳಿಂದ ಕಿಗ್ಗದ ಶಾಲೆಗಳಿಗೆ ಬರುವ ಮಕ್ಕಳ ಕೈಲಿ ಮರ ಕೆತ್ತುವವರಿಗಾಗಿ ಹಗ್ಗ ಕಳಿಸಲು ಅರಣ್ಯ ಇಲಾಖೆಯ ಹಿರಿಯ ನೌಕರನೊಬ್ಬ ಕಿಗ್ಗದ ಮನೆಯೊಂದರಲ್ಲಿ ವಿಚಾರಿಸಿದ್ದು ಗೊತ್ತಾಗಿದೆ. ಅಂದರೆ, ಮರ ಕೆತ್ತುವುದು ಇಲಾಖೆಗೆ ತಿಳಿದಿರಲಿಲ್ಲ ಎಂಬ ವಾದ ಸುಳ್ಳಾಗುತ್ತದೆ.

ಸುಳ್ಳು ಹೆಸರು

ತೊಪ್ಪೆ ಸಂಗ್ರಹಣೆಯ ಸ್ಥಳೀಯ ಉಸ್ತುವಾರಿಯನ್ನು ಸೂರಪ್ಪ ಎಂಬಾತ ವಹಿಸಿಕೊಂಡಿದ್ದ ಎಂದು ಈ ಹಿಂದೆ ವರದಿ ಮಾಡಿದ್ದೆವು. ಆದರೆ, ಆತನ ಹೆಸರು ಸೂರಪ್ಪ ಎಂದಾಗಿರದೆ ಬೇರೆ-ಏನೋ ಇದ್ದು, ಊರಿನವರಿಗೆ ಸುಳ್ಳು ಹೆಸರು ಹೇಳಿದ್ದಾನೆ ಎನ್ನಲಾಗಿದೆ. ಬಹುಶಃ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರುಗಳನ್ನು ಬಳಸಿರುವ ಸಾಧ್ಯತೆಯಿದೆ. ಈ ವ್ಯವಹಾರ ಅಕ್ರಮವಾಗಿ ನಡೆಯುತ್ತಿತ್ತೆಂಬುದಕ್ಕೆ ಇದೂ ಒಂದು ಸೂಚನೆಯೆನ್ನಬಹುದು.

ಅರಣ್ಯಾಧಿಕಾರಿ ಹೇಳಿಕೆ

೩೦-೫-೮೨ ರ 'ಬೀಸಣಿಗೆ'ಯಲ್ಲಿ ಈ ಅಕ್ರಮ ವ್ಯವಹಾರದ ವರದಿ ಪ್ರಕಟವಾದೊಡನೆ ಶೃಂಗೇರಿ ವಲಯ ಅರಣ್ಯಾಧಿಕಾರಿ ಸೂರ್ಯಾಚಾರ್ ಒಂದು ಪತ್ರಿಕಾ ಹೇಳಿಕೆ ನೀಡಿರುವುದಾಗಿ ವರದಿಯಾಗಿದೆ. ತಂಗಡಿ ಮತ್ತು ನಕ್ಕೆ ಮರಗಳ ತೊಪ್ಪೆ ಸಂಗ್ರಹಿಸಲು ಇಲಾಖೆಯಲ್ಲಿ ೧೫ ಸಾವಿರ ರೂ. ಠೇವಣಿ ಇಟ್ಟು ಪರವಾನಗಿ ಪಡೆದ ಅಬ್ದುಲ್ ಕರೀಂ ಎಂಬಾತ ಅವು ಸಿಗದಿದ್ದಾಗ ಗುಳಮಾವಿನ ತೊಪ್ಪೆ ಸಂಗ್ರಹಿಸಿ ಸಾಗಿಸಲು ಯತ್ನಿಸಿದ್ದ, ಕೆಲವು ಪ್ರಕರಣಗಳಲ್ಲಿ ಮಾಲನ್ನು ವಶಪಡಿಸಿಕೊಂಡಿರುವುದಾಗಿ ಸೂರ್ಯಾಚಾರ್ ಹೇಳಿದ್ದಾರಂತೆ. ಅಲ್ಪ ಪ್ರಮಾಣದಲ್ಲಿ ತೊಪ್ಪೆ ಕಳ್ಳಸಾಗಣೆಯಾಗಿರಬಹುದು; ಪತ್ರಿಕೆಯಲ್ಲಿ ವರದಿಯಾದಷ್ಟು ರವಾನೆಯಾಗಿಲ್ಲ ಎಂದೂ ಅವರು ಹೇಳಿಕೆ ಇತ್ತಿರುವುದಾಗಿಯೂ ವರದಿಯಾಗಿದೆ.

ಈ ಹೇಳಿಕೆಯ ಪ್ರತಿ ನಮ್ಮ ಕಾರ್ಯಾಲಯಕ್ಕೆ ಬಂದಿಲ್ಲ.

ತಾರೀಖು ೨೦-೬-೮೨ ರ ಪತ್ರಿಕೆ ಪ್ರಕಟವಾಗುವುದಿಲ್ಲ. —ಸಂ.

ಸಂಪಾದಕೀಯ

ಕನ್ಸರ್ವೇಟರರ ನೇರ ಜವಾಬ್ದಾರಿ

ಶೃಂಗೇರಿ ತಾಲೂಕಿನಲ್ಲಿ ಗುಳಮಾವಿನ ತೊಪ್ಪೆ ಅಕ್ರಮ ಸಾಗಣೆಯಾಗಿರುವುದನ್ನು ವಲಯ ಅರಣ್ಯಾಧಿಕಾರಿಗಳೇ ಒಪ್ಪಿಕೊಂಡಿರುವುದಾಗಿ ವರದಿಯಾಗಿದೆ. ಆದರೆ ನಮ್ಮ ಪತ್ರಿಕೆಯಲ್ಲಿ ವರದಿ ಆದಷ್ಟು ಪ್ರಮಾಣದಲ್ಲಿ ಆಗಿಲ್ಲವಂತೆ. ಹಾಗಾದರೆ ಆದದ್ದೆಷ್ಟು?

ಎರಡನೇ ಪ್ರಶ್ನೆ: 'ಕೆಲವು ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿದ್ದು ಮಾಲ ವಶಪಡಿಸಿಕೊಳ್ಳಲಾಗಿದೆ' ಎಂದು ಈಗ ಹೇಳಿಕೆ ಕೊಟ್ಟಿರುವ ಅವರು, ನಾವು ಮೇ ೧೫ ರಂದು ಅವರ ಹತ್ತಿರ ಈ ಕಳ್ಳಸಾಗಣೆ ಬಗ್ಗೆ ವಿಚಾರಿಸಿದಾಗ 'ಹಾಗೇನೂ ನಡೆದಿಲ್ಲ. ನಡೆದಿದ್ದರೆ ನಮಗೆ ವರದಿ ಬರುತ್ತಿತ್ತು' ಎಂದು ಏಕೆ ಹೇಳಿದರು?

'ಅಷ್ಟೇನೂ ಕಳ್ಳಸಾಗಣೆಯಾಗಿಲ್ಲ' ಎಂದು ತಾವೇ ಹೇಳಿಕೆ ಕೊಟ್ಟಮೇಲೆ ಕೈ ಕೆಳಗಿನ ಅಧಿಕಾರಿಗಳಿಂದ ಸಮಜಾಯಿಷಿ ಕೇಳುವುದೇನಿದೆ? ಹಾಗಾದರೆ ಇವರು ಕೊಟ್ಟ ಹೇಳಿಕೆಗೆ ಆಧಾರ ಏನು?

ಮಾರ್ಚ್ ಕೊನೆಗೇ ಕಾರ್ಯಾಚರಣೆ ಮುಗಿದಿದೆ. ಮೇ ೧೫ ರಲ್ಲಿ "ಯಾವುದೇ ವರದಿ ಇಲ್ಲ" ಈಗ "ಮಾಲು ವಶಪಡಿಸಿಕೊಂಡಿದ್ದೇವೆ" ಎಂಬ ಹೇಳಿಕೆ. ಇದರಲ್ಲಿ ಯಾವುದು ಸಮಂಜಸ? ಯಾವಾಗ ಮಾಲು ವಶಪಡಿಸಿಕೊಂಡಿದ್ದು? ಯಾರು?

ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೇಳುವ ಹಕ್ಕು ಗ್ರಾಮಸ್ಥರಿಗಿದೆ.

"ಅಧಿಕಾರಿಗಳ ಸಹಕಾರವಿಲ್ಲದೆ ಕಳ್ಳಸಾಗಣೆ ಅಸಾಧ್ಯ" ಎಂದು ಕುಖ್ಯಾತ ಕಳ್ಳಸಾಗಣೆದಾರನೊಬ್ಬ ಹಿಂದೊಮ್ಮೆ ಹೇಳಿದ್ದಾನೆ. ಈಗಲೂ ಅಷ್ಟೆ. ಠೇವಣಿ ಮುಟ್ಟುಗೋಲು, ರಹದಾರಿ ವಜಾ, ಕಂಟ್ರಾಕ್ಟ್ ತಿರಸ್ಕಾರ- ಇವೆಲ್ಲವೂ ಪ್ರಕರಣ ಜನರ ಮನಸ್ಸಿನಿಂದ ಮರೆಯಾಗುವ ತನಕ ಮಾತ್ರ ಜಾರಿಯಲ್ಲಿರುವ ಕ್ರಮಗಳು. ಜನರ ಕಣ್ಣೊರೆಸುವ ಈ ಕ್ರಮಗಳೆಲ್ಲ ಈಗ ಉಪಯೋಗವಿಲ್ಲ.

ಇಡೀ ಪ್ರಕರಣದ ಸಮಗ್ರ ತನಿಖೆಯಾಗಬೇಕು. ಅಕ್ರಮ ನಡೆಯುವಲ್ಲಿ ಯಾರ್ಯಾರ ಕೈವಾಡ ಎಷ್ಟೆಷ್ಟು, ಯಾರ್ಯಾರ ಪಾಲು ಎಷ್ಟೆಷ್ಟು ಎಂಬುದು ಪತ್ತೆಯಾಗಬೇಕು. ಅಷ್ಟಷ್ಟು ಕ್ರಮ ಅವರ ಮೇಲೆ ಜರುಗಬೇಕು. ಇಲ್ಲವಾದರೆ, "ಕಾಡು ಬೆಳೆಸಿ. ಕಾಡು ಉಳಿಸಿ" ಮುಂತಾದ ಘೋಷಣೆಯನ್ನು ಕೂಗುವ ನೈತಿಕ ಹಕ್ಕು ಇಲಾಖೆಗಿರುವುದಿಲ್ಲ. ಅಷ್ಟೇ ಅಲ್ಲ, ಅರಣ್ಯ ಸಂರಕ್ಷಣೆಗೆ ಬೇಕಾದ ನೈತಿಕ ಬಲ ಗ್ರಾಮಸ್ಥರಿಗೂ ಇರುವುದಿಲ್ಲ.

ಸ್ಥಳೀಯ ನೌಕರರು ಹಿಂದಿನಿಂದ ತಮಗೆ ಕಿರುಕುಳ ಕೊಡಬಹುದು ಎಂಬ ಭಯದಿಂದ ಗ್ರಾಮಸ್ಥರು ಸಾಕ್ಷ್ಯಾಧಾರ ಕೊಡಲು ಹಿಂಜರಿಯಬಹುದು. ಹೀಗಾಗದಂತೆ ಇಲಾಖೆಯ ಹಿರಿಯರು ಜಾಗ್ರತೆ ವಹಿಸಬೇಕು. ನಾವನ್ನೆದಿರಿಸುತ್ತಿರುವ ಅಸಂಖ್ಯ ಬೋಳು ಮರಗಳ ಮೂಕ ಸಾಕ್ಷಿಯಂತೂ ಇದ್ದೇ ಇದೆ-ಅವು ಮಣ್ಣಾಗುವ ಮೊದಲೇ ತನಿಖೆ ನಡೆಯುವುದಾದರೆ!

ಇದು ನೇರವಾಗಿ ಅರಣ್ಯ ಸಂರಕ್ಷಣಾಧಿಕಾರಿಗಳ (ಕನ್ಸರ್ವೇಟರ್) ನೈತಿಕ ಜವಾಬ್ದಾರಿ. ಒಬ್ಬ ವಲಯ ಅರಣ್ಯಾಧಿಕಾರಿ ಇದಕ್ಕೆ ಖಂಡಿತ ಅರ್ಹರಲ್ಲ.

ರ್ಯಾಗಿಂಗ್ ತಡೆಗೆ ಕೇಂದ್ರ ಸರ್ಕಾರದ ಕ್ರಮ

ನವದೆಹಲಿ: ವಿದ್ಯಾಸಂಸ್ಥೆಗಳು ಮುಖ್ಯವಾಗಿ ಉನ್ನತ ಸಂಸ್ಥೆಗಳಲ್ಲಿ ರ್ಯಾಗಿಂಗ್ ಅನ್ನು ಈ ಶೈಕ್ಷಣಿಕ ವರ್ಷದಿಂದ ನಿಷೇಧಿಸಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳು, ವಿ. ವಿ. ನಿಲಯಗಳ ಉಪಕುಲಪತಿಗಳು, ಇಂಜನಿಯರಿಂಗ್ ಮತ್ತಿತರ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರಿಗೆ ಕಳಿಸಿದ ಪತ್ರದಲ್ಲಿ ಕೇಳಿದೆ. ಕಾಲೇಜು ಆವರಣದಲ್ಲಿ, ಹಾಸ್ಟೆಲುಗಳಲ್ಲಿ, ರ್ಯಾಗಿಂಗ್‌ನಲ್ಲಿ ತೊಡಗುವವರನ್ನು ತಕ್ಷಣ ಸಂಸ್ಥೆಯಿಂದ ಹೊರಹಾಕುವಂತೆ ಆದೇಶಿಸಲಾಗಿದೆ.

ತಾಲೂಕು ವಿದ್ಯಾಧಿಕಾರಿಗಳ ವರ್ಗ

ಕೊಪ್ಪ: ವರ್ಷಗಳಿಂದ ಇಲ್ಲಿ [illegible] ವಿದ್ಯಾಧಿಕಾರಿಯಾಗಿದ್ದ ಎಂ. ಚಂದ್ರಶೇಖರಯ್ಯನವರು ಇತ್ತೀಚೆಗೆ [illegible] ಪ್ರೌಢಶಾಲೆಗೆ ವರ್ಗವಾಗಿ ಹೋಗಿದ್ದಾರೆ.

ದಕ್ಷ ಅಧಿಕಾರಿಯಾಗಿಯೂ, [illegible] ಈ ಯುವಕ ಅಧಿಕಾರಿ [illegible] ಆಗಿದ್ದರು. [illegible] ತಮ್ಮಿಂದಾಗುವ ಸಹಾಯವನ್ನು ಕೊಡುತ್ತಿದ್ದರು. [illegible] ಅಧಿಕಾರಾವಧಿಯಲ್ಲಿ [illegible] ರಿಗಳು-ಮಂತ್ರಿಗಳು [illegible] ಅವರ ನೌಕರಿಯಲ್ಲೇ [illegible]

ಮಲ್ಲಯ್ಯ ಎಂಬುವವರು ಹೊಸ ವಿದ್ಯಾಧಿಕಾರಿಯಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ.

ಅಂಚೆ ನೌಕರರ ಸಭೆ

ನರಸಿಂಹರಾಜಪುರ: ಅಖಿಲ ಭಾರತ ಅಂಚೆ ನೌಕರರ ಸಂಘದ ಕೊಪ್ಪ ಶಾಖೆಯ ಮಾಸಿಕ ಸಭೆಯು ಜೂನ್ ೬ ರಂದು ನರಸಿಂಹರಾಜಪುರದಲ್ಲಿ ನಡೆಯಿತು. ಅಧ್ಯಕ್ಷತೆ ವಹಿಸಿದ್ದ [illegible] ಸಂಘದ [illegible] ಕರೆ ಕೊಟ್ಟರು. [illegible] (ಕಾರ್ಯದರ್ಶಿ) [illegible] ಪಿ. ಎನ್. [illegible] ಎಸ್. [illegible]

ಸಗೋತ್ರ ವಿವಾಹ: ಒಂದು ವೈಜ್ಞಾನಿಕ ದೃಷ್ಟಿಕೋನ

ಎಲ್. ನಾಗೇಂದ್ರ, ಎಂ. ಎಸ್ಸಿ.

ಸಗೋತ್ರ ವಿವಾಹದ ಬಗ್ಗೆ 'ದೀವಟಿಗೆ'ಯಲ್ಲಿ ಬಂದ ಲೇಖನದ ಬಗ್ಗೆ ಮತ್ತು ಅದರ ಪ್ರತಿಕ್ರಿಯೆಗಳ ಬಗ್ಗೆ ಕೆಲವು ವಿಭಿನ್ನ ಮನೋಭಾವದ ಗೌರವಾನ್ವಿತ ವ್ಯಕ್ತಿಗಳೊಡನೆ ಚರ್ಚಿಸಿ ನನ್ನ ವಿಶ್ಲೇಷಣೆಯನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

ಚಾರಿತ್ರಿಕವಾಗಿ ......

ಒಬ್ಬ ಸಮಾಜ ಶಾಸ್ತ್ರದ ಪ್ರಾಧ್ಯಾಪಕರ ಅಭಿಪ್ರಾಯದಲ್ಲಿ ಸಗೋತ್ರ ವಿವಾಹ ಪಾಪಕರ ಎಂಬ ಅಭಿಪ್ರಾಯ ಸಮಾಜದಲ್ಲಿ ಮೂಡಿದ್ದಕ್ಕೆ ಕಾರಣ ಪ್ರಾಚೀನ ಅವಿಭಕ್ತ ಕುಟುಂಬ ಪದ್ಧತಿ ಮತ್ತು ಆಚರಣೆಗಳು. ಒಂದು ಕುಟುಂಬ ತಲೆಮಾರಿನೊಡನೆ ಕವಲೊಡೆದು ಬೆಳೆಯುತ್ತಾ ಬಂದಂತೆ ಮೂಲಭೂತವಾಗಿ ತಾವೆಲ್ಲ ಒಂದು ಎಂಬ ಅಭಿಪ್ರಾಯ ಅವರಲ್ಲಿ ಮೂಡಿರುತ್ತದೆ. ಆ ಭಾವನೆ ಪವಿತ್ರವಾದದ್ದು. ಅದು ಲೈಂಗಿಕ ಪ್ರಜ್ಞೆಯ ಬಗೆಗಿನ ಮನೋಭಾವವನ್ನೂ ಮೀರಿದುದು. ಅಲ್ಲಿ ಪರಸ್ಪರ ಲೈಂಗಿಕ ಸಂಬಂಧ ಪಾಪಕರ ಎಂಬ ಧಾರ್ಮಿಕ ಪ್ರಜ್ಞೆ ಮೂಡುತ್ತದೆ. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬಂತೆ ಒಂದು ಕುಟುಂಬದ ಹೆಣ್ಣು ಮತ್ತು ಅವಳ ಸಂತಾನಕ್ಕೆ ಈ ತತ್ವ ಅನ್ವಯವಾಗದು. ಹಾಗಾಗಿ ಸೋದರಿಕೆ ವಿವಾಹ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಮಾನ್ಯಮಾಡಲ್ಪಡುತ್ತವೆ. ಇದು ನಮ್ಮ ಸಂಸ್ಕೃತಿಯ ಅಭ್ಯಾಸದಿಂದ ಕಂಡು ಬಂದ ಅಭಿಪ್ರಾಯ. ಆದರೆ ಮುಸ್ಲಿಂ ಸಂಸ್ಕೃತಿಯಲ್ಲಿ ಇದಕ್ಕೆ ವಿಭಿನ್ನವಾದ ಸಂಪ್ರದಾಯಗಳು ಕಂಡುಬರುತ್ತವೆ. ಒಬ್ಬ ಮುಸ್ಲಿಂ ಯುವಕನಿಗೆ ಅವನ ತಂದೆಯ ತಮ್ಮನ – ಅಂದರೆ ಚಿಕ್ಕಪ್ಪನ – ಮಗಳು ಪತ್ನಿಯಾಗಬಲ್ಲಳು. ಪ್ರಾಚೀನ ಬ್ರಿಟಿಷ್ ಅಥವಾ ಐರೋಪ್ಯ ರಾಜಮನೆತನಗಳ ಚರಿತ್ರೆಯನ್ನು ಅಭ್ಯಸಿಸಿದರೆ ಕೆಲವು ವಿಚಿತ್ರ ಎನ್ನಬಹುದಾದ ನಡವಳಿಕೆಗಳು ತೋರುತ್ತವೆ. ಸಂತತಿಯ ರಕ್ತ ಶುದ್ಧವಾಗಿಡಬೇಕೆಂಬ ದೃಷ್ಟಿಯಿಂದ ಅಲ್ಲಿ ಒಂದೇ ತಂದೆ-ತಾಯಿಯರ ಗಂಡು–ಹೆಣ್ಣು ಮಕ್ಕಳ-ಅಂದರೆ ಅಣ್ಣ–ತಂಗಿಯರ ನಡುವೆ ಲೈಂಗಿಕ ಸಂಪರ್ಕ ಏರ್ಪಡಿಸಲಾಗುತ್ತಿತ್ತು. ಆದುದರಿಂದ "ಸಗೋತ್ರ ವಿವಾಹ ಪಾಪಕರ" ಎಂಬುದು ನಮ್ಮ ಸಂಸ್ಕೃತಿ ಸಾಮಾಜಿಕವಾಗಿ ನಮ್ಮಲ್ಲಿ ಮೂಡಿಸಿದ [illegible]ದೃಷ್ಟಿಕೋನವೇ ಹೊರತು ಆಧುನಿಕ ಯುಗದಲ್ಲಿ, ವೈಚಾರಿಕ ಮನೋಭಾವ ಮೂಡಿಸಿಕೊಂಡರೆ ಪಾಪಕರ ಎನ್ನುವಂತಹವೇನೂ ಅದರಲ್ಲಿಲ್ಲ. ಏಕೆಂದರೆ ಇಂದಿನ ವಿಸ್ತಾರ ಜನ ಸಾಗರದಲ್ಲಿ ಯಾವುದೇ ಸಂತತಿ ಅಥವಾ ಜನಾಂಗ ಶುದ್ಧವಾಗಿ, ತಮ್ಮ ಮೂಲರೂಪದಲ್ಲೇ ಇದೆ ಎಂದರೆ ಅರ್ಥಹೀನ ಆಗುತ್ತದೆ.

ಜೀವ ಶಾಸ್ತ್ರ ಏನು ಹೇಳುತ್ತದೆ?

ಒಬ್ಬ ಜೀವಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ಈ ನಿಷಿದ್ಧ ಎಂಬ ಮನೋಭಾವನೆ ಸಂಪೂರ್ಣ ಅರ್ಥಹೀನ. ಏಕೆಂದರೆ ಮನುಷ್ಯನ ಹೊರತಾಗಿ ಬೇರೆ ಯಾವ ಪ್ರಾಣಿ ಅಥವಾ ಸಸ್ಯಗಳಲ್ಲೂ ಈ ರೀತಿಯ ನಿಷೇಧಗಳಿಲ್ಲ. ಒಂದು ವೇಳೆ ಪ್ರಾಕೃತಿಕವಾಗಿ ಏನಾದರೂ ನ್ಯೂನ್ಯತೆಗಳು ಸಂಭವಿಸುವಂತಿದ್ದರೆ ಎಲ್ಲ ಪ್ರಾಣಿ ಪಕ್ಷಿಗಳಲ್ಲೂ ಈ ಸಂಬಂಧಗಳು ಏರ್ಪಡದಂತೆ ಪ್ರಕೃತಿಯೇ ಸ್ವತಃ ವ್ಯವಸ್ಥೆ ಮಾಡುತ್ತಿತ್ತು. ಆದರೆ ಈ ರೀತಿಯ ನಿಷೇಧ ಯಾವ ಸಸ್ಯ–ಪ್ರಾಣಿಗಳ ದೈಹಿಕ ರಚನೆಯಲ್ಲೂ ಕಂಡುಬಂದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕೆಲವು ಅಂಶಗಳು ಸಿಗುತ್ತವೆ. ದಾಸವಾಳದಂತಹ ದ್ವಿಲಿಂಗಿ ಸಸ್ಯಗಳಲ್ಲಿ ಒಂದೇ ಹೂವಿನಲ್ಲಿ ಶಲಾಕೆ–(ಪುನರುತ್ಪಾದನಾ ಸ್ತ್ರೀ ಭಾಗ) ಮತ್ತು ಪರಾಗರೇಣು (ಪುರುಷ ಭಾಗ) ಕಂಡು ಬರುತ್ತವೆ. ಇಲ್ಲಿ ಈ ವ್ಯವಸ್ಥೆಯನ್ನು ಪ್ರಕೃತಿ ರೂಪಿಸಿದ್ದ. ಏಕಲಿಂಗಿ ಸಸ್ಯಗಳ ಪುನರುತ್ಪಾದನಾ ಕಾರ್ಯದಲ್ಲಿ ಬರುವ ಹಲವು ತೊಡಕುಗಳನ್ನು ಕಳೆಯಲು. ಪ್ರಾಣಿಗಳಲ್ಲೂ ಇಂತಹ ಹಲವು ಉದಾಹರಣೆಗಳನ್ನು ನೋಡಬಹುದು. ಆದುದರಿಂದಲೇ ಇಂದು ಸಾಮಾಜಿಕವಾಗಿ ಸಾಕಷ್ಟು ತೊಡಕಿನದಾದ ವೈವಾಹಿಕ ಸಂಬಂಧಗಳನ್ನು ಈ ನೆಪದಲ್ಲಿ ಮತ್ತಷ್ಟು ತೊಡಕಿನದಾಗಿ ಮಾಡುವುದು ಸಂಪೂರ್ಣ ಅರ್ಥರಹಿತ.

ಮಾನಸಿಕ ಸಿದ್ಧತೆಯಿದ್ದರೆ ......

ಈ ಬಗ್ಗೆ ಒಬ್ಬ ಮನೋಶಾಸ್ತ್ರಜ್ಞರನ್ನು ಸಂದರ್ಶಿಸಿದೆ. ಕೆಲವು ದಿನಗಳ ಹಿಂದೆ ಹಿಂದೂ ಮತ್ತು ಕನ್ನಡಪ್ರಭ-ಪ್ರಜಾವಾಣಿ ಪತ್ರಿಕೆಗಳಲ್ಲಿ ಬಂದ "ಸಗೋತ್ರ ವಿವಾಹದಿಂದ ಜನಿಸುವ ಮಕ್ಕಳು ಮಾನಸಿಕವಾಗಿ ದುರ್ಬಲರಾಗುತ್ತಾರೆ" ಎಂಬ ವರದಿಯನ್ನು ನೆನಪಿಸಿದೆ. ಅವರು ಒಮ್ಮೆ ನಕ್ಕು ಇವು ಕೇವಲ ಸಂಖ್ಯಾಶಾಸ್ತ್ರವನ್ನು ಆಧರಿಸಿದ ಶೀರ್ಷಿಕೆಗಳು ಎಂದು ತಳ್ಳಿ ಹಾಕಿದರು. ಸಗೋತ್ರ ವಿವಾಹ ಏನೂ ತಪ್ಪಲ್ಲ. ಆದರೆ ವಿವಾಹದ ನಂತರವೂ 'ತಮ್ಮದು ಸಗೋತ್ರ ವಿವಾಹ, ಆದುದರಿಂದ ಅದು ಪಾಪಕರ' ಎಂಬ ಭಾವನೆ ಮತ್ತು ಕೊರಗು ದಂಪತಿಗಳಲ್ಲಿದ್ದರೆ ಮಾತ್ರ ಅವರ ಸಂತಾನದಲ್ಲಿ ಮನೋದೌರ್ಬಲ್ಯದ ಸಂಭವಗಳು ಹೆಚ್ಚು ಎಂದರು. ಸಗೋತ್ರ ವಿವಾಹ ಈ ರೀತಿಯಲ್ಲಿ ಮಾತ್ರ ಮನೋ ವಿಜ್ಞಾನದಲ್ಲಿ ನಿಷಿದ್ಧ ಎನ್ನಬಹುದು. ಅದು ಪಾಪಕರ ಅಲ್ಲ. ಆದರೆ ಆ ಪಾಪಕರ ಎಂಬ ಪ್ರಜ್ಞೆ ಮಾತ್ರ ನಮ್ಮ ಸಮಾಜದಲ್ಲಿರುವವರೆಗೂ ಅಥವಾ ವಿವಾಹಿತರಲ್ಲಿ ಒಂದು ಕೊರಗಾಗಿ ಉಳಿದಿರುವವರೆಗೂ ಮಾತ್ರ ಅದು ಸ್ವಲ್ಪ ಮಟ್ಟಿಗೆ ಪರಿಣಾಮ ಬೀರಬಲ್ಲದು ಎಂದರು. ನಮ್ಮ ಯುವಜನರು ಸಗೋತ್ರ ವಿವಾಹಕ್ಕೆ ಮನ್ನ ಮಾನಸಿಕವಾಗಿ ಸಿದ್ಧರಾಗಬಹುದಾದರೆ ಅದು ಏನೂ ಅಪಾಯವಲ್ಲ.

ವೈಚಾರಿಕವಾಗಿ

ಒಬ್ಬ ವಿಚಾರವಾದಿಗಳನ್ನು ಪ್ರಶ್ನಿಸಿದಾಗ ಅವರು ವಿಶ್ಲೇಷಿಸಿದ್ದು ತಮ್ಮದೇ ದೃಷ್ಟಿಯಲ್ಲಿ. ಆರಂಭದಲ್ಲೆ, 'ಈ ಎಲ್ಲ ಸಂಪ್ರದಾಯಗಳೂ ಅರ್ಥಹೀನ. ಅಂತೆಯೇ ಇದೂ' ಎಂದೂ ಈ ವಿಚಾರವನ್ನೇ ದೃಷ್ಟಿಯಲ್ಲಿರಿಸಿ ಅವರು ತಿಳಿಸಿದರು.–ಗೋತ್ರ ಒಂದು ಸಂತತಿಗೆ ಮೂಲ ಕಾರಣ ಎಂದು ನಂಬಲ್ಪಡುವ ಒಬ್ಬ ಋಷಿಯ ಹೆಸರಿನಿಂದ ಆ ಸಂತತಿಯನ್ನು ಗುರ್ತಿಸುವ ಶಾಸ್ತ್ರಕ್ರಮ ಅಷ್ಟೇ. ಎಲ್ಲಾ ಗೋತ್ರಗಳನ್ನು ಒಟ್ಟು ಎಣಿಸಿದರೆ ನೂರನ್ನು ಮೀರಲಾರದು. ಆ ನೂರು ಋಷಿಗಳೇ ಇಂದಿನ ಜನಸ್ತೋಮದ ಮೂಲರಾಗುವಂತಿದ್ದರೆ ಆ ನಿಷೇಧದಿಂದಾಗಿ ಇಂದು ಇಷ್ಟೊಂದು ಜನ ಇರುತ್ತಲೇ ಇರಲಿಲ್ಲ. ಹಾಗಾಗಿ ಬಹಳಷ್ಟು ಜನ ತಮ್ಮ ಗೋತ್ರ ಇದೆಂದು ಹೇಳುವುದು ಅವರೇ ಸೃಷ್ಟಿಸಿದ ಪುರಾವೆ ಆಗುತ್ತದೆ. ಹಾಗಾಗಿ ಈ ಗೋತ್ರಗಳೇ ಅರ್ಥವಿಲ್ಲದ್ದು ಎಂದರು.

ಒಬ್ಬ ವೈದ್ಯರು ಈ ಬಗ್ಗೆ ತಮಗೆ ಹೆಚ್ಚು ಗೊತ್ತಿಲ್ಲ ಎಂದರು. ಒಬ್ಬ ಸಂಪ್ರದಾಯಸ್ಥರು ಇದು ಮಹಾಪಾಪ ಎನ್ನುತ್ತಾ ತಮ್ಮಿಂದಲೇ ಸೃಷ್ಟಿಸಲ್ಪಟ್ಟ ಕತೆಗಳ ಮಾಲೆಯನ್ನೇ ನೀಡಿದರು. ●

ಶೃಂಗೇರಿಯಲ್ಲಿ ಈಚೆಗೆ ನಡೆದ ಎರಡು ಮೆರವಣಿಗೆಗಳು

—ಗುಂಡಪ್ಪ, ಶೃಂಗೇರಿ

ಶೃಂಗೇರಿಯಲ್ಲಿ ಈಚೆಗೆ ಅನ್ಯಾಯಕ್ಕೆ ಒಳಗಾಗಿದ್ದೇವೆಂದು ಹೇಳುವ ಎರಡು ಬೇರೆ ಬೇರೆ ಸಮುದಾಯಗಳಿಂದ ನ್ಯಾಯಕ್ಕಾಗಿ ಒತ್ತಾಯಿಸಿ ಎರಡು ಮೆರವಣಿಗೆಗಳು ನಡೆದವು. ಒಂದು ಮಾರ್ಚ್-೨೬ ರಂದು ದಲಿತ ಸಂಘರ್ಷ ಸಮಿತಿಯ ತಾ॥ ಶಾಖೆ ಉದ್ಘಾಟನೆ ಸಂದರ್ಭದಲ್ಲಿ ದಲಿತರು; ಇನ್ನೊಂದು ಮೇ ೨೨ ರಂದು ತಾ॥ ರೈತ ಸಂಘದ ನಾಯಕತ್ವದಲ್ಲಿ ರೈತರದ್ದು. ಮೊದಲಿನದರಲ್ಲಿ ನಾನೂರಕ್ಕಿಂತ ಸ್ವಲ್ಪ ಜಾಸ್ತಿ, ಎರಡನೆಯದರಲ್ಲಿ ನಾನೂರಕಿಂತ ಸ್ವಲ್ಪ ಕಡಿಮೆ ಇದ್ದರು.ಇನೆರಡನ್ನೂ ಪೋಲಿಸ ಜೀಕೆನ್ನಿಸಿತು.

ದಲಿತರ ಮೆರವಣಿಗೆ ಅತ್ಯಂತ ಹುಮ್ಮಸ್ಸು, ರೋಷಾವೇಶಗಳಿಂದ ಕೂಡಿತ್ತು. ಅದರ ನಾಯಕರು ಮತ್ತು ಕೆಲವು ಕಾರ್ಯಕರ್ತರ ಹೊರತು ಉಳಿದವರೆಲ್ಲ ಇದೇ ಮೊದಲ ಸಲ ಬೀದಿಯಲ್ಲಿ ಮೆರವಣಿಗೆ ಹೊರಟವರು. ಏನು ದಾಪುಗಾಲು, ಏನು ಘೋಷಣೆ, ಎಂಥ ನಡಿಗೆ, ಏನು ಹೊಂದಾಣಿಕೆ–ಶಿಸ್ತು! ಮೆರವಣಿಗೆಯ ತಲೆಯಿಂದ ಬಾಲದವರೆಗೂ ಅಲ್ಲಲ್ಲಿ ಘೋಷಣೆ ಕೊಡುವವರು–ಅದಕ್ಕೆ ಉತ್ತರವಾಗಿ, ಹಳೆಯ ಮನೆಗಳೆಲ್ಲ ಒಮ್ಮೆ ಅದುರುವಂತೆ. ಯಾವ ಮುಲಾಜಿಲ್ಲದೆ ಪ್ರತಿ ಘೋಷಣೆ ಕೊಡುವ ಜನ. ಎಲ್ಲರ- ಮುದುಕರ, ಮೂಳೆ ಚಕ್ಕಳಗಳ ಬಾಯಲ್ಲೂ–ಘೋಷಣೆ.

ಈ ಹಿನ್ನೆಲೆಯಿಂದ ಮೊನ್ನೆಯ ರೈತ ಮೆರವಣಿಗೆ ನೋಡಿದಾಗ ಒಂದು ರೀತಿ ವ್ಯಥೆಯೇ ಆಯಿತು. ಮುಂದುಗಡೆ ಆಟೋ ರಿಕ್ಷಾದಲ್ಲಿ ಧ್ವನಿವರ್ಧಕದಲ್ಲಿ ಘೋಷಣೆ ಕೊಟ್ಟರೆ ಪ್ರತಿ ಘೋಷಣೆ ನಾಲ್ಕು ಮಾರು ಆಚೆಗೆ ಕೇಳುತ್ತಿರಲಿಲ್ಲ. ಗೂಡ್ಸ್ ರೈಲು ಹಾವುಹೋದರೆ–ಇಂಜಿನ್ನು ಆರ್ಭಟಿಸಿಕೊಂಡುಹೋಗುತ್ತದೆ; ಹಿಂದಿನಿಂದ ಬಹಳ ಹೊತ್ತು ಡಬ್ಬಿಗಳು ಹೋಗುತ್ತಲೇ ಇರುತ್ತವೆ-ನಿಃಶಬ್ದವಾಗಿ, ತೂಕಡಿಸುತ್ತಿರುವಂತೆ. ಇಂಥ ಅನುಭವವಾಗುತ್ತಿತ್ತು ನೋಡುತ್ತ ನಿಂತವರಿಗೆ. ನಡಿಗೆಯಲ್ಲಿ ಛಲವಿಲ್ಲ, ಹೊಂದಾಣಿಕೆಯಿಲ್ಲ, ಶಿಸ್ತಿಲ್ಲ. (ಘೋಷಣೆ ಮಾತ್ರ 'ಶಾಂತಿ–ಶಿಸ್ತು'!) ಇವರಲ್ಲಿ ಬಹಳ ಜನ ಈಗಾಗಲೇ ಮೆರವಣಿಗೆಯ ಅನುಭವ ಇದ್ದವರೆಂದು ನನ್ನ ಅಂದಾಜು. ಅನ್ಯಾಯಕ್ಕೊಳಗಾದವರ ಪ್ರತಿಭಟನಾ ಮೆರವಣಿಗೆ ಎಂದು ಹೇಳಲು ಬರುವಂತಿರಲಿಲ್ಲ.

ಯಾಕೆ? ರೈತರಿಗೆ ಏನಾಗಿದೆ? ಅವರಿಗೆ ಸಮಸ್ಯೆಗಳಿಲ್ಲವೆ? ಕಾರುಗದ್ದೆ ಕುಯ್ಲು, ಮಳೆಗಾಲದ ಕೆಲಸ–ಹೀಗೆ ಎರಡೂ ಕಡೆಯ ಕೆಲಸದ ಒತ್ತಡದಲ್ಲೂ ಸುಮಾರು ನಾನ್ನೂರು ಜನ ಸೇರಿದ್ದು ಕಮ್ಮಿಯಲ್ಲವಾದರೂ ಯಾಕೆ ಆ ಹುಮ್ಮಸ್ಸಿಲ್ಲ? ಬಾಯಿ ಬಿಡಲು ನಾಚಿಕೆಯೆ? ಯಾರದೋ ಒತ್ತಾಯಕ್ಕೆ ಹೋಗುವವರಂತೆ ತಲೆ ತಗ್ಗಿಸಿ ಹೋಗುವಂಥದ್ದು ಏನಿದೆ? ಇವುಗಳಿಂದ ನ್ಯಾಯ ದೊರೆತೀತೆಂಬ ನಂಬಿಕೆಯಿಲ್ಲವೆ, ಅಥವಾ ಇಂಥವು ಅರ್ಥವಾಗಿಲ್ಲವೆ,-ಅಥವಾ ನಾಯಕರಲ್ಲಿ ನಂಬಿಕೆಯಿಲ್ಲವೆ ಯಾಕೆ?

ನಿಜ–ನಿಮ್ಮ ಈ ನಾಯಕರಲ್ಲಿ ಬಹಳ ಜನ ಒಂದಲ್ಲೊಂದು ರೀತಿ ಚುನಾವಣೆ ರಾಜಕೀಯದಲ್ಲಿದ್ದವರು – ಇರುವವರು; ಎಂದು ಬೇಕಾದರೂ ಆಚೀಚೆ ಆಗಬಹುದಾದ ನೆಲೆಗಟ್ಟಿನವರು ಅದೇ ದಲಿತರ ನಾಯಕರು ಮಣ್ಣಿನಿಂದ, ಕೆಸರಿನಿಂದ, ಬಡಿತ ಕೊಲೆ–ಜೀತಗಳಿಂದ ಸೀದಾ ಎದ್ದು ಬಂದವರು–ದಾಪುಗಾಲು ಹಾಕಿ. ಆ ಚೈತನ್ಯದ ಹುಟ್ಟೇ ಬೇರೆ.

ಆದರೂ-ರೈತ ಸಮುದಾಯ ಕೂಡ ಶೋಷಣೆಗೆ ಗುರಿಯಾದದ್ದು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅದನ್ನು ತಿಳಿಕೊಳ್ಳಲು, ವ್ಯಕ್ತಪಡಿಸಲು ಹುಮ್ಮಸ್ಸಿಲ್ಲದ್ದು ಕಂಡಾಗ ವ್ಯಥೆಯಾಗುತ್ತದೆ.

ಓದುಗರ ಪತ್ರಗಳು

ನಾಲ್ಕು ಮನೆ ಇದ್ದಲ್ಲಿ ಬಾವಿ ಇಲ್ಲ; ಒಂದು ಮನೆಗೆ ಒಂದು ಬಾವಿ

'ದೀವಟಿಗೆ' ಸಂಪಾದಕರಿಗೆ
ಸ್ವಾಮಿ,
ಶೃಂಗೇರಿ ತಾ॥ ಗುಡಗಟ್ಟೆ ಗ್ರಾಮದ ಹೆರಕೋಡು ಎಂಬುವಲ್ಲಿ ಒಂದು ಮನೆಗೆ ಒಂದು ಬಾವಿ ಇದೆ. ಇದು ಸರಕಾರಿ ಬಾವಿ. ಇದು ಇಲ್ಲಿಯ ಗ್ರಾಮಸ್ಥರಿಗೆ ಎಲ್ಲ ಗೊತ್ತಿದೆ. ಅವರು ಲಾಯರು ಆದ ಕಾರಣ ಅವರ ಒಂದು ಮನೆಗೆ ಒಂದು ಬಾವಿ ಆಗಬೇಕು. ಅದಕ್ಕೆ ಸರ್ಕಾರಿ ಹಣವೇ ಆಗಬೇಕು.

ಇವರನ್ನು ಹಿಡಿದು ಕೇಳುತ್ತಿದ್ದಾರೆ ದಲಿತರು.

-ಒಬ್ಬ ದಲಿತ, ಹೆರಕೋಡು, ಶೃಂಗೇರಿ ತಾ

[ಈ ಪತ್ರ-ಆಕಸ್ಮಾತ್ ಒಂದೆರಡು ವರ್ಷ ಶಾಲೆ ಕಂಡು ಕಲಿತದ್ದು ನಂತರದ ಕೂಲಿ-ನಾಲಿಯ ನಡುವೆಯೂ ಪೂರ್ತಿ ಅಳಿಸಿ ಹೋಗಲಾರದೆ ಉಳಿದುಕೊಂಡ ದಲಿತ ಭಾಷೆ-ಲಿಪಿಯಲ್ಲಿದೆ. ಅದನ್ನು "ಭಾಷಾನುವಾದ" ಮಾಡಿದ್ದೇವೆ -ಸಂ]

ಸರ್ಕಾರಿ ಬಾವಿ ತಾ. ಅ. ಮಂ ಸದಸ್ಯರಿಗೇ?

ಸ್ವಾಮಿ,
ಶೃಂಗೇರಿ ತಾ. ಅ. ಮಂಡಳಿಯಿಂದ ಬಂದ ಬಾವಿ ನಮ್ಮಗಳಿಗೆ ಉಪಯೋಗವಿಲ್ಲದೆ ಬರೀ ಇಲ್ಲಿನ ತಾ. ಅ. ಮಂ. ಸದಸ್ಯರ ಮನೆಯ ಪಕ್ಕದಲ್ಲಿ ಹಾಕಿಸಿಕೊಂಡಿದ್ದಾರೆ. ಆ ಬಾವಿಯೇನಾದರೂ ಸದಸ್ಯರ ಮನೆಯ ಪಕ್ಕಕ್ಕೆ ಅಂತ ಬಂದಿದೆಯೋ ನಾಕು ಜನರ ಉಪಯೋಗಕ್ಕೆ ಅಂತಲೋ ನಮಗೆ ತಿಳಿಯದಾಗಿದೆ.

ಇವರ ಮನೆಯ ಎದುರು ೨೫ ಗಜ ದೂರದಲ್ಲೇ ಒಂದು ಬಾವಿ ದುರಸ್ತಿ ಇಲ್ಲದೆ ಇದೆ. ನೀರಿಗೆ ತೊಂದರೆ ಇದ್ದರೆ ಅದನ್ನು ದುರಸ್ತಿ ಮಾಡಿದ್ದರೆ ಆಗುತ್ತಿರಲಿಲ್ಲವೆ?

ನೀರಿಗಾಗಿ ಪರದಾಡುತ್ತಿರುವ ಇನ್ನು ನಾಲ್ಕಾರು ಮನೆಗಳಿರುವಲ್ಲಿಗೆ ಈಗ ಆಗುತ್ತಿರುವ ಬಾವಿಯನ್ನು ಬದಲಾಯಿಸಲು ಮೇಲ್ಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇಡೀ ಯಡದಳ್ಳಿಯ ಜನತೆ ಕ್ರಮ ಕೈಗೊಳ್ಳುವರು.

-ಯಡದಳ್ಳಿ ಗ್ರಾಮಸ್ಥರು, ಶೃಂಗೇರಿ ತಾ

"ನಕಾಶೆಯಲ್ಲಿ ಕಂಡ ರಸ್ತೆಗೆ ಬೇಲಿ ಹಾಕಿದ್ದಾರೆ; ತೆಗೆಸಿ"

ಮಾನ್ಯರೆ,
ಹರಿಹರಪುರದ ಸಮೀಪ ರಘುಶೆಟ್ಟಿ ಎಂಬುವರು ಒಂದು ಕಾಫಿ ತೋಟ ಮಾಡುತ್ತಿದ್ದಾರೆ. ನಕಾಶೆಯಲ್ಲಿ ಕಂಡಿರುವ ಒಂದು ರಸ್ತೆಯನ್ನೂ ಸೇರಿಸಿ ಬೇಲಿ ಹಾಕಿದ್ದಾರೆ. ರಾಮಪ್ಪ ಆಚಾರಿಯ ಕಲುವೆಯ ಹತ್ತಿರ ಇಳಿದು ಬಂಡಿಗಡಿ ರಸ್ತೆಗೆ ಸೇರುವ ಬಹಳ ಮುಖ್ಯವಾದ ಒಳ ರಸ್ತೆ. ಇದರಿಂದ ಶಾಲೆ ಮಕ್ಕಳಿಗೆ, ದನಕರುಗಳಿಗೆ, ಹರಿಹರಪುರದ ಜನ ಸೌದೆ-ಸೊಪ್ಪು ತರುವುದಕ್ಕೆ- ಪ್ರತಿಯೊಂದಕ್ಕೂ ತೊಂದರೆಯಾಗಿರುತ್ತೆ. ಕೇಳಲು ಹರಿಹರಪುರ ಪಂಚಾಯಿತ್ತಿ ಅಧ್ಯಕ್ಷ ಸದಸ್ಯರಿಗೆ ಶಕ್ತಿ ಇಲ್ಲ. ತಹಸೀಲ್ದಾರರು ಮನಸ್ಸಿಗೆ ತಂದುಕೊಂಡು ಈ ತೊಂದರೆ ತಪ್ಪಿಸಬೇಕಾಗಿ ಕೇಳಿಕೊಳ್ಳುತ್ತ ಇದ್ದೇವೆ.

ತೊಂದರೆಗೊಳಗಾದ ಜನರ ಪರವಾಗಿ,
-ಹೆಚ್. ಆರ್. ರಾಮಣ್ಣಗೌಡ್ರು.

ಫಾರೆಸ್ಟ್ ಗಾರ್ಡ್‌ಗಳ ಹಾವಳಿ ತಪ್ಪಿಸಿ.

ಮಾನ್ಯರೆ,
ಶೃಂಗೇರಿ ತಾ॥ ಅಡ್ಡಗದ್ದೆ ಮತ್ತು ಕೆಳಕೊಪ್ಪ ಗ್ರಾಮಕ್ಕೆ ಒಬ್ಬ ಹೊಸ ಫಾರೆಸ್ಟ್ ಗಾರ್ಡ್ ಬಂದಿರುತ್ತಾರೆ. ಅವರು ಊರಿನ ಬಡ-ಬಗ್ಗ ರೈತರನ್ನು ತುಂಬಾ ಹೀನ ಭಾಷೆಯಲ್ಲಿ ಬೈದು, ಪಂಚಿಸಿ ಲಂಚ ತೆಗೆದುಕೊಳ್ಳುತ್ತಾರೆ. ಒಂದು ಹೊರೆ ಸೌದೆ ಕಡಿದರೆ ರೈತರನ್ನು ತಿಂದುಬಿಡುವಂತೆ ಆರ್ಭಟಿಸುತ್ತಾರೆ. ಇದರಿಂದ ಬಡಬಗ್ಗ ರೈತರು ದನಗಳಿಗೆ ಅಗತ್ಯವಾದ ಸೊಪ್ಪು, ಸೌದೆ ಮತ್ತು ಮರಗಳನ್ನು ಕಾಡಿನಿಂದ ತರುವುದಕ್ಕೆ ತುಂಬಾ ಕಠಿಣವಾಗಿದೆ. ಸೌದೆ ಮುಂತಾದವುಗಳನ್ನು ಕಾಡಿನಿಂದ ತಂದರೆ "ಐವತ್ತು ರೂಪಾಯಿ ಕೊಡಿ; ನೂರು ರೂಪಾಯಿ ಕೊಡಿ. ಪರ್ಮಿಟ್ ರಶೀದಿಯನ್ನು ಆಮೇಲೆ ಕೊಡುತ್ತೇನೆ" ಎಂದು ಹೆದರಿಸಿ, ಅತ್ತ ಸರಕಾರಕ್ಕೂ ಇತ್ತ ಬಡ-ಬಗ್ಗ ರೈತರಿಗೂ ವಂಚಿಸಿ ಹಣವನ್ನು ಒಳಗೆ ಹಾಕಿಕೊಳ್ಳುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕಾಗಿ ಪ್ರಾರ್ಥನೆ.

-ರಾವ್, ಅಡ್ಡಗದ್ದೆ

ದಾಸರ ಮಠ: ಮಾಹಿತಿ ಕೊಡಿ

ಕೊಪ್ಪದಿಂದ ಚಿಕ್ಕಮಗಳೂರು ರಸ್ತೆಯಲ್ಲಿ ಸುಮಾರು ಒಂದೂವರೆ ಮೈಲಿ ದೂರದಲ್ಲಿರುವ ಶೆಟ್ಟಿಸಮನೆ ಎಂಬ ಸ್ಥಳದಲ್ಲಿ ರಸ್ತೆಯಿಂದ ಒಂದು ಫರ್ಲಾಂಗ್ ಎತ್ತರಕ್ಕೆ 'ದಾಸರ ಮಠ' ಎಂಬ ದೇವಸ್ಥಾನ ಹಾಳು ಬಿದ್ದಿದೆ. ಅದರ ಬಗ್ಗೆ ಏನೂ ತಿಳಿಯುತ್ತಿಲ್ಲ. ಅದರ ಕುರಿತು ವಿಷಯ ಸಂಗ್ರಹ ಮಾಡುವ ಆಸಕ್ತಿ ಇದೆ. ತಿಳಿದವರು ಸಾಧ್ಯವಾದಷ್ಟು ವಿಷಯಗಳನ್ನು ತಿಳಿಸಿ. ೧. ದಾಸರ ಮಠ ಎಂದು ಹೆಸರು ಬರಲು ಕಾರಣ ೨. ಯಾವ ಮತದವರದು ೩. ಯಾವಾಗ, ಯಾವ ಕಾರಣದಿಂದ ಬಿದ್ದು ಹೋಯಿತು. ೪. ಎಷ್ಟು ಹಳೆಯದು. ೫. ಯಾವ ರಾಜಾಡಳಿತ ಸಂದರ್ಭದಲ್ಲಿ ನಿರ್ಮಿಸಲ್ಪಟ್ಟಿತು. ೬. ಅದನ್ನು ಕುರಿತಂತೆ ಶಿಲಾಲೇಖನಗಳು ಅಥವಾ ಬೇರೇನಾದರೂ ಕುರುಹುಗಳಿವೆಯೇ? (ಪುಸ್ತಕ ಇತ್ಯಾದಿ) ೭. ಕೊಪ್ಪ ಪ್ರದೇಶ ಯಾವ ಧಾರ್ಮಿಕ ರಾಜಕೀಯ ಆಡಳಿತಕ್ಕೆ ಒಳಪಟ್ಟಿತ್ತು ಅಥವಾ ಅದಕ್ಕೆ ಸಂಬಂಧಿಸಿದ ವಿವರಗಳು ಎಲ್ಲಿ ಸಿಗುತ್ತವೆ? ಗೊತ್ತಿರುವವರು ದಯವಿಟ್ಟು ಉತ್ತರಿಸಿ.

-ಶಂಕರ್. ಕೇರಾಫ್ ದೀವಟಿಗೆ, ಕೊಪ್ಪ

"ಸ್ವಲ್ಪ ಕನ್ನಡದಲ್ಲಿ ಮಾತಾಡ್ರಪ್ಪ"

ಕೊಪ್ಪ: ಈಚೆಗೆ ನಡೆದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಸಮಿತಿಯ ಸಭೆಯಲ್ಲಿ ಕಂದಾಯ ಉಪವಿಭಾಗಾಧಿಕಾರಿ ನರಸಿಂಹಯ್ಯನವರಿಂದ ಹಿಡಿದು ಬ್ಯಾಂಕ್ ಮತ್ತಿತರ ಅಧಿಕಾರಿಗಳವರೆಗೆ ಎಲ್ಲರೂ ಇಂಗ್ಲೀಷನ್ನು ಧಾರಾಳವಾಗಿ ಬಳಸಿ ಮಾತಾಡುತ್ತಿದ್ದರು. ಒಂದು ಹಂತದಲ್ಲಿ ಇದು ಅತಿಯಾಗಿ, 'ಪೊಟೆನ್ಶಿಯಾಲಿಟಿ, ಪೊಟೆನ್ಶಿಯಾಲಿಟಿ' ಎಂದುಕೊಂಡು ಏನೇನೋ ಬಿಸಿ ಬಿಸಿ ಚರ್ಚೆ ಮಾಡುತ್ತಿದ್ದರು. ಇವನ್ನೆಲ್ಲ ಅರ್ಥಮಾಡಿಕೊಳ್ಳಲಾಗದೆ ಚಡಪಡಿಸಿದ ಕನ್ನಡಿಗ ಸದಸ್ಯರೊಬ್ಬರು "ಸ್ವಲ್ಪ ಕನ್ನಡದಲ್ಲಿ ಮಾತಾಡ್ರಪ್ಪ" ಎಂದು ಹೇಳಿದರೂ ಪ್ರಯೋಜನವಾಗಲಿಲ್ಲ. ಕೊನೆಗೊಮ್ಮೆ ಆ ಸದಸ್ಯರೇ ಏನೋ ಮಾತಾಡಬೇಕಾಗಿ ಬಂತು. ಅವರೇನು ಮಾಡಿದರು ಗೊತ್ತೇ? ತಾವೂ ತಪ್ಪು ತಪ್ಪು ಇಂಗ್ಲಿಷಿನಲ್ಲೇ ಮಾತಾಡಿ ಕೂತರು.

ಹಳ್ಳಿಗಾಡಿನಲ್ಲೂ ಕನ್ನಡದ ಕಾಂತಿ ಕುಂಬಾಗುತ್ತಿರುವ ರೀತಿ ನೋಡಿದರೆ "ಧನ್ಯ, ಕನ್ನಡಿಗ!" ಎನ್ನಬೇಕಲ್ಲವೆ?

ಸುದ್ದಿ ಸಂಗ್ರಹ

ಮಳೆ ಅನಾಹುತ

ಜೂನ್ ೯ ರ ರಾತ್ರಿ ಆವರಿಸಿದ ಸುತ್ತ ಮುತ್ತ ಬಿಡದೆ ಸುರಿದ ಧಾರಾಕಾರ ಮಳೆಯಿಂದಾಗಿ ಕನಿಷ್ಠ ಪಕ್ಷ ೧೮ ಮಂದಿ ಸತ್ತಿದ್ದಾರೆಂದು ವರದಿಯಾಗಿದೆ. [illegible] ನದಿಗಳ ಪ್ರಕೋಪ [illegible] ಕಾಣಿಸಿಕೊಂಡು, [illegible] ಜಾಸ್ತಿಯಾಗಿರಬಹುದೆಂಬ [illegible] ನೂರಾರು [illegible]. [illegible] ನಾಶವಾಗಿದೆ. [illegible] ಭಾರಿ [illegible] [illegible] ಮಳೆ [illegible] [illegible].

ಅಂಕುಶೆ ಅಪೀಲು ತಿರಸ್ಕೃತ

ಮಹಾರಾಷ್ಟ್ರದ [illegible] ಅಂಕುಶೆ [illegible] 'ದಾಸ್', [illegible] ಗಳಿಗೆ [illegible] ಮಹಾರಾಷ್ಟ್ರ [illegible] ನ್ಯಾಯಮೂರ್ತಿ [illegible] ಅಂಕುಶೆಯನ್ನು [illegible] [illegible] ಈ ತೀರ್ಪು ನೀಡಿದೆ.

"ಬೋಳು ಮರಗಳೇ ತನಿಖೆಗೆ ಆಧಾರವಾಗಲಿ"

ಮಾನ್ಯರೆ,
ತಾವು ತಮ್ಮ ೩೦-೫-೮೩ ರ ಸಂಚಿಕೆಯಲ್ಲಿ '[illegible] ಕೊಪ್ಪೆ ಅಕ್ರಮ ಸಂಗ್ರಹ, ಸಾಗಣೆ' ಅನ್ನುವ ಒಂದು ಉಪಯುಕ್ತವಾದ ಮಾಹಿತಿಯನ್ನು ಒದಗಿಸಿದ್ದೀರಿ. ಇಂತಹ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ಪ್ರಮುಖ ವಿಷಯಗಳನ್ನು ಹೆಚ್ಚು ಹೆಚ್ಚಾಗಿ ಎಲ್ಲರ ಗಮನಕ್ಕೆ ತರಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಸದರಿ ವರದಿಯಲ್ಲಿ ಶೃಂಗೇರಿ ವಲಯ ಅರಣ್ಯಾಧಿಕಾರಿಯವರ ಹೇಳಿಕೆ ಸಮಂಜಸವಾಗಿಲ್ಲವೆನ್ನಿಸುತ್ತದೆ. ಇಂತಹ ಅಕ್ರಮಗಳನ್ನು ಸ್ವತಃ ಅರಣ್ಯ ಇಲಾಖೆಯವರೇ ತಿಳಿದುಕೊಳ್ಳದೆ ಸಾರ್ವಜನಿಕರಿಂದ ದೂರನ್ನು ನಿರೀಕ್ಷಿಸುವುದು ಹಾಸ್ಯಾಸ್ಪದ. ಅರಣ್ಯ ಇಲಾಖೆಯಿಂದ ಕಂಟ್ರಾಕ್ಟರು ಅನುಮತಿ ಪಡೆದಿದ್ದಾನೆಯೋ ಇಲ್ಲವೋ ಎನ್ನುವುದು ಸಾರ್ವಜನಿಕರಿಗೆ ಹೇಗೆ ತಿಳಿಯಬೇಕು? ಮತ್ತು ಇಷ್ಟೊಂದು ವ್ಯಾಪಕವಾಗಿ ಅಕ್ರಮ ಸಂಗ್ರಹಣೆ ನಡೆದಿರುವಾಗ ಇಲಾಖೆಯ ಯಾವನೊಬ್ಬ 'ಗಾರ್ಡ್' (ಅರಣ್ಯ ಸಂರಕ್ಷಕ)ನಿಗೆ ತಿಳಿಯಲಿಲ್ಲವೆಂದರೆ ಅವರು ಮಾಡುವ ಸಂರಕ್ಷಣೆ ಎಂಥಾದ್ದು?

ಹೀಗೊಂದು 'ಕತೆ' ಪ್ರಚಲಿತವಿದೆ. ಒಮ್ಮೆ ಒಬ್ಬ ರೈತನ ಮನೆಯ ಹಿಂಬದಿಯ ದರೆ ಕುಸಿದು ಒಂದು ಮರ ಮಗುಚಿ ಬೀಳುವುದರಲ್ಲಿದ್ದಾಗ ಆ ಮರವನ್ನು ರೈತ ಕೂಡಲೇ ಕಡಿಯಬೇಕಾಗಿ ಬಂತು. ಅದನ್ನು ಕಡಿದನಂತೆ. ಮಾರನೇ ದಿನವೇ ಒಬ್ಬ ಗಾರ್ಡ್ ಬಂದು ಎರಡು ಕೋಳಿಗಳನ್ನು ಜುಲ್ಮಾನೆಯಾಗಿ ವಸೂಲು ಮಾಡಿಕೊಂಡು ಹೋದನಂತೆ. ಗಾರ್ಡುಗಳು ಅಷ್ಟು ವಿಚಕ್ಷಣೆಯಿಂದ ಕೆಲಸ ಮಾಡುತ್ತಾರೆ ಎಂದು ಜನ ಹೇಳುತ್ತಾರೆ.

ಹಾಗಿರುವಾಗ ಅರಣ್ಯ ಇಲಾಖೆಯ ಗಮನಕ್ಕೆ ಬಂದಿಲ್ಲವೆಂದರೆ-'ಅದಕ್ಕೆ ಹೊಸತೊಂದು ಅರ್ಥ ಬರುತ್ತದೆ ಅಷ್ಟೆ'.

ಇರಲಿ, ಇನ್ನು ಬೇರೆ ಮೂಲಗಳಿಗೆ ಕಾಯದೆ, ನಿಮ್ಮ ವರದಿಯ ಮುಕ್ತ ಕಾಡಿನ ಬೋಳು ಮರಗಳ ಆಧಾರದ ಮೇಲೆ ಸಂಬಂಧಪಟ್ಟವರು ಕ್ರಮ ಕೈಗೊಳ್ಳಲಿ. ಮತ್ತು ಈ ವಿಷಯ ಕೊನೆ ಮುಟ್ಟುವವರೆಗೂ, ತಾವು ಈ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಬೇಕಾಗಿ ಪ್ರಾರ್ಥನೆ.

ಇನ್ನೊಂದು ವಿಚಾರ: ಸಗೋತ್ರ ವಿವಾಹದ ಬಗ್ಗೆ ತಾವು ಮಠಾಧಿಪರ ಅಭಿಪ್ರಾಯ ಕೇಳಿರುವುದು ಸಮಂಜಸವಾಗಿದೆ. ಈ ವಿಚಾರದಲ್ಲಿ ಯಾರಾದರೂ ರಾಜಕೀಯ ತಂದರೆ ಅದು ಅನುಚಿತ. ಇಂತಹ ಹಿಂದೂ ಧಾರ್ಮಿಕ ವಿಚಾರದಲ್ಲಿ ಕ್ರಿಶ್ಚಿಯನ್ ಬಿಷಪ್ಪರ ಅಭಿಪ್ರಾಯ ಕೇಳಬೇಕಿತ್ತೆ?

-ಗುಂಡಪ್ಪ, ಶೃಂಗೇರಿ.

ಗಿರಿಜನ ಮಹಿಳೆಯರ ಹೊಲಿಗೆ ತರಬೇತಿ ಶಾಲೆ:

ಬಡ ಹೆಣ್ಣು ಮಕ್ಕಳ ಬವಣೆಯ ನೆಲೆ?

ಜಯಪುರ: ಇಲ್ಲಿನ ಗಿರಿಜನ ಮಹಿಳೆಯರ ಹೊಲಿಗೆ ತರಬೇತಿ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿರುವ ೧೫ ಮಂದಿ ಗಿರಿಜನ ಹೆಣ್ಣು ಮಕ್ಕಳಿಗೆ ೫ ತಿಂಗಳಿಂದಲೂ ಸ್ಟೈಪಂಡ್ ಬಂದಿಲ್ಲವೆಂದು ತಿಳಿದುಬಂದಿದೆ. ಈಗ ನಡೆಯುತ್ತಿರುವ ಮೂರನೇ ತಂಡದ ತರಬೇತಿ ಫೆಬ್ರವರಿಯಲ್ಲೇ ಶುರುವಾಗಿದೆ.

ಅಭ್ಯರ್ಥಿಗಳ ಆಯ್ಕೆ ಮೂಡಿಗೆರೆಯ ಗಿರಿಜನ ಅಭಿವೃದ್ಧಿ ಯೋಜನಾ ಕೇಂದ್ರದಿಂದ. ಸ್ಟೈಪಂಡ್ ಮುಂತಾದ ಖರ್ಚುವೆಚ್ಚಗಳ ಬಟವಾಡೆ ಚಿಕ್ಕಮಗಳೂರಿನ ಕೈಗಾರಿಕಾ ತರಬೇತಿ ಸಂಸ್ಥೆಯ (ಐ.ಟಿ.ಐ.) ಪ್ರಾಚಾರ್ಯರ ಜವಾಬ್ದಾರಿ.

ತರಬೇತಿ ಕೇಂದ್ರದಿಂದ ಅಭ್ಯರ್ಥಿಗಳ ಪಟ್ಟಿಯನ್ನು ಮೂಡಿಗೆರೆಗೆ ಕಳಿಸಲಾಗಿದೆ—ಯಾದರೂ ಅಲ್ಲಿಂದ ಐ. ಟಿ. ಐ. ಗೆ ಪಟ್ಟಿ ಬಂದಿಲ್ಲದ್ದರಿಂದ ಅವರು ಸ್ಟೈಪಂಡ್ ಕಳಿಸಿಲ್ಲವೆನ್ನಲಾಗಿದೆ. ಅಭ್ಯರ್ಥಿಗಳು ತಲಾ ೫ ರೂ. ಕೊಟ್ಟರೆ ಮೂಡಿಗೆರೆಗೆ ಹೋಗಿ ಹಣ ಬರುವಂತೆ ವ್ಯವಸ್ಥೆ ಮಾಡುವುದಾಗಿ ಇಲ್ಲಿನ ಶಿಕ್ಷಕಿ ತಿಳಿಸಿದರೆನ್ನಲಾಗಿದೆ.

ತರಬೇತಿ ಕೇಂದ್ರದಲ್ಲಿ ಅಭ್ಯರ್ಥಿಗಳಿಗೆ ಊಟ, ವಸತಿ ಸೌಕರ್ಯವಿಲ್ಲದೆ, ಕೂಲಿಕಾರರ ಮಕ್ಕಳೇ ಹೆಚ್ಚಾಗಿರುವ ಅವರೆಲ್ಲ ಬಹಳ ಕಷ್ಟದಿಂದ ದಿನ ತಳ್ಳುತ್ತಿದ್ದು ಶಿಕ್ಷಣವನ್ನು ಅರ್ಧಕ್ಕೇ ಕೈಬಿಡಬೇಕಾದ ಪರಿಸ್ಥಿತಿ ಇದೆಯೆಂದು ಪೋಷಕರು ತಿಳಿಸಿದ್ದಾರೆ.

ಮೊದಲ ವರ್ಷ ನಾಲ್ಕೈದು ತಿಂಗಳು ಕಷ್ಟದಿಂದ ಹಾಸ್ಟೆಲು ನಡೆಸಿ, ಅನಂತರ ಅಭ್ಯರ್ಥಿಗಳು ಸ್ವಂತ ವ್ಯವಸ್ಥೆ ಮಾಡಿಕೊಳ್ಳುವ ಆಸಕ್ತಿ ತೋರಿಸಿದ್ದರಿಂದ ಹಾಸ್ಟೆಲು ನಿಲ್ಲಿಸಲಾಯಿತು ಎಂದು ಕೇಂದ್ರದ ಹಿರಿಯ ಶಿಕ್ಷಕಿ ಹೇಳುತ್ತಾರೆ. ಇದರಿಂದ ಹಾಸ್ಟೆಲ್‌ಗಾಗಿ ಸರ್ಕಾರದಿಂದ ದೊರೆಯುವ ಸಾವಿರಾರು ರೂ. ಸೌಲಭ್ಯ ಅಭ್ಯರ್ಥಿಗಳಿಗೆ ದೊರೆಯದೆ ಹೋಗುತ್ತಿದೆ.

ವರ್ಷಕ್ಕೆ ಎರಡು ಜೊತೆ ಸಮವಸ್ತ್ರ ಕೊಡುತ್ತಿದ್ದುದನ್ನು ಈ ವರ್ಷ ಕೊಟ್ಟಿಲ್ಲವೆನ್ನಲಾಗಿದೆ. ಸೂಜಿ, ದಾರ, ಬಾಬಿನ್ ಕೇಸು, ಕಟ್ಟಿಂಗಿಗೆ ಕಾಗದ, ಬಟ್ಟೆ ಮುಂತಾದ್ದನ್ನು ಐಟಿಐನಿಂದ ಒದಗಿಸಿದ್ದೇವೆಂದು ಪ್ರಾಚಾರ್ಯರು ಹೇಳಿದ್ದಾರೆ. ಆದರೆ ಇಲ್ಲಿ ಮಾತ್ರ ದುಡ್ಡು ಕೊಡದೆ ಅವನ್ನು ಕೊಡುತ್ತಿಲ್ಲ ಎಂದು ಪೋಷಕರೊಬ್ಬರು ದೂರಿದ್ದಾರೆ.

ಕೇಂದ್ರದಲ್ಲಿ ಇಬ್ಬರು ಶಿಕ್ಷಕಿಯರು ಇರಬೇಕಾಗಿದ್ದು, ಬಹಳ ಸಮಯದ ಹಿಂದೆಯೇ ರಜ ಹಾಕಿ ಹೋದ ಕಿರಿಯ ಶಿಕ್ಷಕಿ ವಾಪಸ್ಸ ಬರದ್ದರಿಂದ ಈಗ ಒಬ್ಬರೇ ನೋಡಿಕೊಳ್ಳಬೇಕಾಗಿದೆ.

ಹಿಂದಿನ ತಂಡದಲ್ಲಿ ತರಬೇತಿ ಪಡೆದ ೪ ಜನ ಸರ್ಕಾರ ಒದಗಿಸಿದ ಹೊಲಿಗೆ ಯಂತ್ರಗಳನ್ನು ಸಮಾರಂಭದ ದಿನ ಪಡೆಯಲಿಲ್ಲ. ಅನಂತರ ೩ ಸಲ ಅವರು ಹೇಳಿದ ದಿನ ಕೂಲಿ ನಾಲಿ ಬಿಟ್ಟು ಬಂದು ೨ ದಿನ ಕಾದರೂ ಸಹ ಯಂತ್ರಗಳನ್ನು ಕೊಟ್ಟಿಲ್ಲ ಎಂದೂ ಆಪಾದಿಸಲಾಗಿದೆ. ದಾಖಲೆ ಪತ್ರಗಳಿಗೆ ಹಿರಿಯ ಅಧಿಕಾರಿಗಳ ಸಹಿ ಬೇಕಾದ್ದರಿಂದ ಅವರೇ ಬಂದು ಹಂಚಬೇಕಾಗಿದೆಯೆಂದು ಶಿಕ್ಷಕಿ ಹೇಳುತ್ತಾರೆ.

ಸರ್ಕಾರದ ಯೋಜನೆಯಿದೆ, ಗ್ರಾಂಟ್ ಇದೆ. ಆದರೆ ಸಿಬ್ಬಂದಿ ಮತ್ತು ಸೌಲಭ್ಯಗಳ ಕೊರತೆ ಹಾಗೂ ಸರಿಯಾದ ವ್ಯವಸ್ಥೆ ಏರ್ಪಡಿಸುವಲ್ಲಿ ಅಧಿಕಾರಿಗಳ ತಾತ್ಸಾರ — ಇವುಗಳಿಂದ ಈ ಶಾಲೆಯೊಂದು ಅನಾಥ ಕೂಸಿನಂತೆ ಬದುಕುತ್ತಿದೆ. ದೂರ ದೂರದ ಬಡ ಹೆಣ್ಣು ಮಕ್ಕಳು ಬವಣೆ ಪಡುವುದೂ ಅಲ್ಲದೆ ಸವಲತ್ತುಗಳನ್ನೂ ಹೊಂದಲು ಸಾಧ್ಯವಿಲ್ಲವಾಗಿದೆ ಎಂದೂ ಪೋಷಕರು ವಿಷಾದಿಸಿದ್ದಾರೆ.

ಸ. ಗ್ರಾ. ಅ. ಯೋಜನೆಯಡಿ

ಸಬ್ಸಿಡಿ ಮಂಜೂರಾಗಿದ್ದರೂ ಪೂರ್ತಿ ಹಣಕ್ಕೆ ತಗಾದೆ

ಕೊಪ್ಪ: ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಕಳೆದವರ್ಷ ಬ್ಯಾಂಕ್ ಸಾಲದಿಂದ ಎಮ್ಮೆ ಮತ್ತೈರೆ ಪಡೆದಿದ್ದ ನರಸೀಪುರ ಗ್ರಾಮದ ೨೨ ಜನರಿಗೆ ಸರ್ಕಾರದ ಸಹಾಯಧನ ಮಂಜೂರಾಗಿ ಬ್ಯಾಂಕಿಗೆ ಸಂದಾಯವಾಗಿದ್ದರೂ ಸಾಲ ಪಡೆದವರಿಗೆ ಬ್ಯಾಂಕಿನಿಂದ ಪೂರ್ತಿ ಹಣಕ್ಕೆ ತಗಾದೆ ನೋಟೀಸು ಜಾರಿಯಾಗಿರುವುದಾಗಿ ತಿಳಿದು ಬಂದಿದೆ. ಮಂಜೂರಾದ ಹಣ ಬಳಕೆಯಾದ ಬಗೆಗೆ ಸಲ್ಲಿಸಬೇಕಾದ ಯುಟಿಲೈಸೇಶನ್ ಸರ್ಟಿಫಿಕೇಟಿನ ಗೊಂದಲ ಈ ಪರಿಸ್ಥಿತಿಗೆ ಕಾರಣವೆನ್ನಲಾಗಿದೆ.

ಈ ಸರ್ಟಿಫಿಕೇಟಿನಲ್ಲಿ ಯದ್ವಾತದ್ವಾ ಮಾಹಿತಿ ಭರ್ತಿ ಮಾಡಬೇಕಾಗಿರುವುದು ಹಾಗೂ ಅವರ ಫಾರಂಗಳು ಸರಿಯಾಗಿ ಸಿಗದೇ ಇರುವುದು ಬ್ಯಾಂಕುಗಳಿಗೊಂದು ತಲೆನೋವಾಗಿದೆ ಎಂದು ಹೇಳಲಾಗಿದೆ.

ಈ ಬಗ್ಗೆ, ಈಚೆಗೆ ಇಲ್ಲಿ ನಡೆದ ಸ.ಗ್ರಾ.ಅ. ಯೋಜನೆ ಸಮಿತಿಯ ಸಭೆಯಲ್ಲಿ ಬ್ಯಾಂಕುಗಳ ಪ್ರತಿನಿಧಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. ಸರ್ಟಿಫಿಕೇಟನ್ನು ಸರಳಗೊಳಿಸಬೇಕೆಂದೂ, ಫಾರಂಗಳನ್ನು ಸಕಾಲದಲ್ಲಿ ಒದಗಿಸಬೇಕೆಂದೂ ಅವರು ಸರ್ಕಾರವನ್ನು ಒತ್ತಾಯಿಸಿದ್ದರು.

೮ ಎಕರೆವರೆಗಿನ ರೈತರಿಗೆ

ಸಾಲ ಮಾಫಿ: ಜೇಗಾನೆ

ಎತ್ತಿನಹಟ್ಟಿ: ಎಂಟು ಎಕರೆವರೆಗಿನ ಹಿಡುವಳಿದಾರರಿಗೂ ಸರ್ಕಾರಿ ಮತ್ತು ಸಹಕಾರಿ ಸಾಲಗಳನ್ನು ಮರುಪಾವತಿ ಮಾಡುವುದರಿಂದ ವಿನಾಯ್ತಿ ನೀಡಲು ಸರ್ಕಾರ ನಿರ್ಧರಿಸಿದೆಯೆಂದು ಜೇಗಾನೆ ರಾಮಯ್ಯ ಮೇಸ್ತರೆಂದು ಇಲ್ಲಿ ತಿಳಿಸಿದರು. ಮೊದಲು ೨ ಎಕರೆವರೆಗೆ ವಿನಾಯ್ತಿ ನೀಡಲು ನಿರ್ಧರಿಸಲಾಗಿತ್ತು. ಈಗ ಮಿತಿಯನ್ನು ಇನ್ನೂ ಏರಿಸಲಾಗಿದೆ ಎಂದ ಅವರು, ಶ್ರೀಮಂತ ರೈತರು ಟ್ರಾಕ್ಟರು, ಪಂಪುಸೆಟ್ಟು ಮುಂತಾದುವನ್ನು ಕೊಳ್ಳಲು ಪಡೆದಿರುವ ಸಾಲಗಳನ್ನು ಹಿಂತಿರುಗಿಸಲು ಒಪ್ಪದೆ "ಗುಂಡೂರಾವ್ ಸರ್ಕಾರ ಬಡವರ, ರೈತರ ವಿರೋಧಿ" ಎಂದು ದೂರುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಬಡರೈತರ ವಿರೋಧಿಯಲ್ಲ ಎಂದು ಹೇಳಿ, "ನೀವು ಪಡೆದಿರುವ ಲಕ್ಷಾಂತರ ರೂಪಾಯಿ ಸಾಲಗಳನ್ನು ಮೊದಲು ಕಟ್ಟಿ. ಬಡವರ ಯೋಗಕ್ಷೇಮ ನಮಗೆ ಬಿಡಿ" ಎಂದು 'ಶ್ರೀಮಂತರೈತರಿಗೆ' ಸವಾಲೆಸೆದರು.

ಈಗ, ಅವರ ಕ್ಷೇತ್ರದ ತಾಲೂಕುಗಳಲ್ಲಿ ೮ ಎಕರೆ ಒಳಗಿನ ಕಮ್ಮಿ ಇರುವ ಯಾರಾದರೂ ರೈತರನ್ನು ಸಾಲಕ್ಕಾಗಿ ಜಪ್ತಿ ಮಾಡಿದ್ದರೆ ರೈತಸಂಘಗಳು ಅಂಥ ಪ್ರಕರಣಗಳನ್ನು ಬೆಳಕಿಗೆ ತಂದು ಅವರಿಗಾದರೂ ನ್ಯಾಯ ದೊರಕಿಸಲು ಶ್ರಮಿಸಬೇಕಾಗಿದೆ.

ಕೆಲಸ ಇದೆ, ಸಂಬಳ ಇಲ್ಲ!

ತೀರ್ಥಹಳ್ಳಿ ತಾ॥ ಬಸವಾನಿಯಲ್ಲಿ ೮೦ನೇ ಜೂನ್‌ನಲ್ಲಿ ಆರಂಭಗೊಂಡ ಪಶುವೈದ್ಯಶಾಲೆಯಲ್ಲಿ ಅದೇ ಆಗಸ್ಟ್‌ನಿಂದ ಪಶು ಪರೀಕ್ಷಕರಾಗಿ ಕೆಲಸ ಮಾಡುತ್ತಿರುವ ಬಿ.ಎಸ್. ಚಂದ್ರಪ್ಪಶೆಟ್ಟಿ ಎಂಬವರಿಗೆ ಈವರೆಗೂ ಸಂಬಳ ಬಂದಿಲ್ಲವಂತೆ. ಆತ ಇಲಾಖೆಯ ಖಾಯಂ ನೌಕರ. ಈ ಮೊದಲು ಬಂಡಿಗಡಿಯಲ್ಲಿದ್ದವರು.

ನೌಕರನ ಪರವಾಗಿ ಆತನ ಹೆಂಡತಿ ಹಾಗೂ ಬಸವಾನಿ ಪಂಚಾಯ್ತಿ ಅನೇಕ ಸಲ ಮನವಿ ಸಲ್ಲಿಸಿದ್ದರೂ ಮನವಿ ಪಡೆದ ಅಧಿಕಾರಿ–ಮಂತ್ರಿಗಳಿಂದ ಈವರೆಗೆ ಫಲ ಸಿಕ್ಕಿಲ್ಲ ಎನ್ನಲಾಗಿದ್ದು, ೪ ಮಕ್ಕಳುಳ್ಳ ಆ ನೌಕರ ಬದುಕಬೇಕಾ ಬೇಡವಾ ಎಂದು ತಿಳಿದವರು ಹೇಳಬೇಕಾಗಿದೆ.

ಹವಾ ನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಸುಖ ಪಡುವ ಹಿರಿಯ ಅಧಿಕಾರಿ–ಮಂತ್ರಿಗಳಿಗೆ ಇಂತಹ ನೌಕರರ ಬವಣೆ ತಿಳಿಯುವಂತೆ ಕಾಣುತ್ತಿಲ್ಲ.

ಕುಂಭಕರ್ಣನಿದ್ರೆಯ ನಾಲ್ಕುಪಟ್ಟು ಜಡರಾಗಿರುವ ಇಂಥವರನ್ನು ಎಬ್ಬಿಸಲು ಹೊಟ್ಟೆಯ ಬವಣೆ ಕೆಚ್ಚಾಗಿ ರಟ್ಟೆಗೆ ಇಳಿಯಬೇಕಷ್ಟೆ!

(ಮಲ್ನಾಡ್ ನ್ಯೂಸ್)

ಅಂಕಿ-ಅಂಶ ಸಂಗ್ರಹ: ಸಂಸ್ಥೆಯ ಕ್ರಮದ ಬಗ್ಗೆ ಅಸಮಾಧಾನ

ಕೊಪ್ಪ: ರಾಜ್ಯದಲ್ಲಿ ಬಡವರ್ಗಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಹಾಕಿಕೊಳ್ಳಲು ಅನುಕೂಲವಾಗುವಂತೆ ವಿವಿಧ ಆರ್ಥಿಕ-ಸಾಮಾಜಿಕ ಅಂಕಿ-ಅಂಶಗಳನ್ನು ಸಂಗ್ರಹಿಸಿ ಕ್ರೋಢೀಕರಿಸಲು ಈಚೆಗೆ ರಾಜ್ಯ ಸರ್ಕಾರದ ಕಂಟ್ರಾಕ್ಟ್ ಪಡೆದ ಗುಜರಾತಿನ ಸಂಸ್ಥೆಯೊಂದು ಅತ್ಯಂತ ವಿವರವಾಗಿ ಮಾಹಿತಿ ಸಂಗ್ರಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆಯಂತೆ. ಅದರಲ್ಲಿ ಮೂಲೆ ಮೂಲೆಯ ಹಳ್ಳಿಗಳ ಒಂದೊಂದು ಬಡ ಕುಟುಂಬದ ಬಗ್ಗೆಯೂ ಮಾಹಿತಿಗಳಿವೆಯಂತೆ.

ಆದರೆ ಆ ಸಂಸ್ಥೆಯವರು ಅಂಕಿ-ಅಂಶ ಸಂಗ್ರಹಿಸಿದ್ದು ಯಾವ ತಾ.ಅ.ಮಂ.ಸದಸ್ಯರಿಗಾಗಲಿ, ಪಂಚಾಯ್ತಿ ಅಧ್ಯಕ್ಷರಿಗಾಗಲಿ ಗೊತ್ತೇ ಆಗಿಲ್ಲವಂತೆ. ನಿಜ ಹೇಳಬೇಕೆಂದರೆ, ಸಂಸ್ಥೆಯವರು ಹಳ್ಳಿಗಳಿಗೆ ಭೇಟಿಕೊಡಲೇ ಇಲ್ಲವಂತೆ. ಕೆಲವು ಗ್ರಾಮಲೆಕ್ಕಿಗರನ್ನು ಹಿಡಿದು ಅವರಿಗೆ ಕೆಲವು ಫಾರಂಗಳನ್ನು ಕೊಟ್ಟು ಮಾಹಿತಿ ಬರೆಸಿಕೊಂಡರಂತೆ —ಅದೂ ನಿಂತ ನಿಲುವಿನಲ್ಲೇ. "ಪಾಪ, ಅವರಿಗೆ ಭಾಷೆ ಕೂಡ (ಕನ್ನಡ) ಬರುತ್ತಿರಲಿಲ್ಲವಂತೆ." ಆದರೂ ಅವರು ಪ್ರತಿ ಹಳ್ಳಿಯ ಪ್ರತಿಯೊಬ್ಬ ಬಡವನ ಮನೆ-ಕೊಟ್ಟಿಗೆ, ದನ-ಕರು, ಕೋಳಿ-ಕುರಿ, ಮಾಡು-ಮುಂಡಿಗೆಕಂಬ, ಮಡಿ-ಬೆಳೆ, ಮಕ್ಕಳು— ಎಲ್ಲಾ ವಿವರಗಳನ್ನೂ ಒದಗಿಸಿದ್ದಾರಂತೆ!

ಈ ವಿಷಯ ಈಚೆಗೆ ನಡೆದ ಸ.ಗ್ರಾ.ಅ. ಯೋಜನೆ ಸಮಿತಿಯ ಸಭೆಯಲ್ಲಿ ಬೆಳಕಿಗೆ ಬಂತು. ತಾ.ಅ.ಮಂ. ಅಧ್ಯಕ್ಷರು ಹಲವು ಸದಸ್ಯರೂ ಸಂಸ್ಥೆಯ ಕ್ರಮದ ಬಗ್ಗೆಯೂ ಅದರ ವರದಿಯ ಬಗ್ಗೆಯೂ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಆಯ್ದ ಕೆಲವು ಹಳ್ಳಿಗಳ ವಿವರಗಳನ್ನು ಪುನಃ ಪರಿಶೀಲಿಸಿ ದೋಷ ಕಂಡುಬಂದರೆ ಸರ್ಕಾರಕ್ಕೆ ವರದಿ ಮಾಡುವುದಾಗಿ ಎ.ಸಿ. ಭರವಸೆ ಕೊಟ್ಟರು.

ಪ್ರೌಢಶಾಲೆ ಫಲಿತಾಂಶ:

ಪೋಷಕರ ಆತಂಕ?

(ನಮ್ಮ ಪ್ರತಿನಿಧಿಯಿಂದ)

ಹರಿಹರಪುರ: ಜಿಲ್ಲೆಯ ಪ್ರಸಿದ್ಧ ಶಾಲೆಗಳಲ್ಲಿ ಒಂದಾಗಿದ್ದು ಕೆಲ ವರುಷಗಳ ಹಿಂದೆ ಉತ್ತಮ ಫಲಿತಾಂಶ ಪಡೆಯುತ್ತಿದ್ದ ಇಲ್ಲಿನ ಪ್ರೌಢಶಾಲೆಗೆ ಈ ವರ್ಷ ಎಸ್ಸೆಸ್ಸೆಲ್ಸಿಯಲ್ಲಿ ಕೇವಲ ಶೇ. ೪೦.೫ ಫಲಿತಾಂಶ ಬಂದಿರುವುದು ಪೋಷಕರಿಗೆ ಆತಂಕವುಂಟುಮಾಡಿದೆ ಎನ್ನಲಾಗಿದೆ.

ಶೃಂಗೇರಿ, ಕಿಗ್ಗ ಶಾಲೆಗಳು, ಕೊಪ್ಪದ ಕಾನ್ವೆಂಟ್ ಶಾಲೆ ಮುಂತಾದುವೆಲ್ಲ ಬಹಳ ಒಳ್ಳೆಯ ಫಲಿತಾಂಶ ಪಡೆದಿವೆ. ಕಳೆದವರ್ಷ ಕೇವಲ ೧೬ರಷ್ಟು ಉತ್ತೀರ್ಣತೆ ಸಾಧಿಸಿದ್ದ ಕೊಪ್ಪ ಪ್ರೌಢಶಾಲೆ ಕೂಡ ಈಸಲ ೩೭.೫ರಷ್ಟು ಉತ್ತಮಪಡಿಸಿಕೊಂಡಿದೆ. ಈಹಿನ್ನೆಲೆಯಲ್ಲಿ ಇಲ್ಲಿನ ಶಾಲೆಯ ಫಲಿತಾಂಶ ಕೆಲವರಾದರೂ ಪೋಷಕರು ಗಂಭೀರವಾಗಿ ಯೋಚಿಸುವಂತೆ ಮಾಡಿರುವುದು ಸ್ಪಷ್ಟವಾಗಿದೆ.

ಕೊಪ್ಪ ಸಂತೆಯಲ್ಲಿ ಕಿಸೆಗಳ್ಳರ ಹಾವಳಿ ಏರಿಕೆ

ಕೊಪ್ಪ: ಇಲ್ಲಿನ ಸಂತೆಯ ನಡುವೆ ಕಿಸೆಗಳ್ಳರ ಹಾವಳಿ ಇತ್ತೀಚಿನ ವಾರಗಳಲ್ಲಿ ಹೆಚ್ಚಾಗಿದೆಯೆಂದು ಹೇಳಲಾಗುತ್ತಿದೆ.

ಕಳೆದವಾರ ಪರವೂರಿನವರೊಬ್ಬರ ೨೦೦ ರೂ. ಲಪಟಾಯಿಸಲಾಯಿತೆಂದು ತಿಳಿದು ಬಂದಿದೆ. ಈ ಹಾವಳಿ ಅತಿಯಾಗುವ ಮುಂಚೆಯೇ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕಾಗಿದೆ.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಶಿರಿಮನೆ ನಾಗರಾಜ್
ಅಚ್ಚು: ನೇಸರ ಮುದ್ರಣ, ಕೊಪ್ಪ.